೨—೦೦ ಪಿ. ಎಂ.

ಶ್ರೀ ಬೈರಪ್ಪಾಜಿ.—ನಾನು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಬೇಕಾಗುತ್ತದೆ. ೭ನೇ ತಾರೀಖು ಈ ಘಟನೆಯ ಬಗ್ಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಅಲ್ಲಿಯ ಡಾಕ್ಟರ್ ಪರೀಕ್ಷೆ ಮಾಡಿಲ್ಲ. ಮತ್ತು ಆಕೆ ಆಸ್ಪತ್ರೆಯಲ್ಲಿ ಉಳಿದುಕೊಳ್ಳಬೇಕೆಂದರೂ ಅದಕ್ಕೆ ಪೋಲೀಸಿನವರು ಆಸ್ಪದ ಕೊಟ್ಟಿಲ್ಲ. ಆಕೆಯ ಮೇಲೆ ಅತ್ಯಾಚಾರ ಆಗಿರುವುದರ ಬಗ್ಗೆ ಆಕೆ ಹೇಳಿದ್ದಾಳೆ. ಆಕೆಯ ಗಂಡ ಸಹಾ ಹೇಳಿರುತ್ತಾರೆ. ಅಕ್ಕಪಕ್ಕದ ಜನರೂ ಸಹಾ ಹೇಳಿದ್ದಾರೆ. ಅಲ್ಲಿಯ ಪೋಲೀಸರೂ ಶರೀಕು ಆಗಿದ್ದು ಈ ದೌರ್ಜನ್ಯ ನಡೆದಿದೆ. ಆ ದಿನ ಅತ್ಯಾಚಾರ ಆಗಿದ್ದು ೧೦ನೇ ತಾರೀಖು ಅವರನ್ನು ಪರೀಕ್ಷೆ ಮಾಡಿದರೆ ಅದು ಸಾಬೀತು ಆಗುತ್ತದೆಯೇ? ಈ ಬಗ್ಗೆ ಮಾನ್ಯ ಮಂತ್ರಿಗಳು ಗಮನ ಹರಿಸಬೇಕು.

ii) ಬೆಳ್ತಂಗಡಿ ತಾಲ್ಲೂಕಿನಲ್ಲಿ ಸರ್ಕಾರಿ ಜಮೀನಿನಲ್ಲಿ ಸಾಗುವಳಿ ಮಾಡುತ್ತಿರುವ ರೈತರ ಉಚ್ಚಾಟನೆಯ ಬಗ್ಗೆ

ಅಧ್ಯಕ್ಷರು.—ಮಾನ್ಯ ವಸಂತ ಬಂಗೇರಾ ಅವರು ತಮ್ಮ ಗಮನ ಸೆಳೆಯುವ ಸೂಚನೆಯನ್ನು ಮಂಡಿಸಲಿ.

ಶ್ರೀ ಕೆ ವಸಂತ ಬಂಗೇರ.—ನನ್ನ ಹೆಸರಿನ ಕೆಳಗಿರುವ ಈ ವಿಷಯದ ಬಗ್ಗೆ ಮಾನ್ಯ ಕಂದಾಯ ಮಂತ್ರಿಗಳ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಕಂದಾಯ ಮಂತ್ರಿಗಳ ಪರವಾಗಿ ನಾನು ಈ ಕೆಳಗಿನ ಹೇಳಿಕೆಯನ್ನು ಕೊಡಬಯಸುತ್ತೇನೆ.

"ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನಲ್ಲಿ ದಿನಾಂಕ ೧೫ನೇ ಆಗಸ್ಟ್ ೧೯೮೨ರ ವರೆಗೆ ೨,೯೪೬ ಜನರು ೫,೩೧೨ ಎಕರೆ ೬೩ ಸೆಂಟ್ಸ್ ಸರ್ಕಾರಿ ಜಮೀನನ್ನು ಆಕ್ರಮಿಸಿರುತ್ತಾರೆ. ಇದರಲ್ಲಿ ಸರ್ಕಾರದ ಆದೇಶದ ಸಂಖ್ಯೆ ಆರ್‌ಡಿ ೧೦೫ ಎಲ್‌ಜಿಪಿ ೭೭ ದಿನಾಂಕ ೧ನೇ ಸೆಪ್ಟೆಂಬರ್ ೧೯೭೭ ಮತ್ತು ಆರ್‌ಡಿ ೩೪ ಎಲ್‌ಜಿಪಿ ೮೧ ದಿನಾಂಕ ೨೭ನೇ ಮಾರ್ಚ್ ೧೯೮೧ರ ಪ್ರಕಾರ ಆಕ್ಷೇಪಣೆಯಲ್ಲದ ಎಲ್ಲಾ ಆಕ್ರಮಣಗಳನ್ನು ಅರ್ಹವ್ಯಕ್ತಿಗಳ ಪರವಾಗಿ ಸಕ್ರಮಗೊಳಿಸಲಾಗಿದೆ. ಉಳಿದ ಆಕ್ರಮಣಗಳು ಆಕ್ಷೇಪಕರ ಕುಮ್ಕಿ, ಕಾಣೆ, ಬಾಣಿ ಮತ್ತು ಅರಣ್ಯ ಬಫರ್ ಜಮೀನಿನಲ್ಲಿ ಬರಬಿತ್ತವೆ. ಆದುದರಿಂದ ಅವುಗಳನ್ನು ಸಕ್ರಮಿಗೊಳಿಸಲು ಬರುವುದಿಲ್ಲ ಮತ್ತು ಅವುಗಳನ್ನು ತೆರವು ಮಾಡಿಸಬೇಕಾಗುತ್ತದೆ. ಬೆಳ್ತಂಗಡಿ ತಾಲ್ಲೂಕಿನಲ್ಲಿ ೨,೬೭೭ ಜನರು ಆಕ್ರಮಣ ಮಾಡಿರುವ ೪,೮೪೫ ಎಕರೆ ೧೭ ಸೆಂಟ್ಸ್ ವಿಸ್ತೀರ್ಣದ ಜಮೀನು ಆಕ್ಷೇಪಕರ ಭೂಮಿಯಲ್ಲಿ ಬರುತ್ತದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಮ್ಕಿ, ಕಾಣೆ, ಬಾಣಿ ಜಮೀನನ್ನು ಅಕ್ಕ ಪಕ್ಕದ ಸಾಗುವಳಿ ದಾರರಿಗೆ ಹಸಿರು ಎಲೆ ಮುಂತಾದವುಗಳನ್ನು ತೆಗೆದುಕೊಳ್ಳಲು ಇರುವ ಹಕ್ಕಿನ (Previleged) ಜಮೀನುಗಳಾಗಿರುತ್ತವೆ. ಇಂಥ ಜಮೀನಿನಲ್ಲಿ ಇರುವ ಆಕ್ರಮಗಳನ್ನು ಸಕ್ರಮಗೊಳಿಸಲು ಬರುವುದಿಲ್ಲ. ಅರಣ್ಯ ಸಂರಕ್ಷಣ ಕಾಯ್ದೆ (ಕೇಂದ್ರ ಕಾಯ್ದೆ) ೧೯೮೦ರ ಪ್ರಕಾರ ಅರಣ್ಯ ಜಮೀನಿನಲ್ಲಿ ಆದ ಅಕ್ರಮಣಗಳನ್ನು ಆಕ್ರಮಗೊಳಿಸಲು ಬರುವುದಿಲ್ಲ."

ಶ್ರೀ ಕೆ. ವಸಂತ ಬಂಗೇರ.—ಅಧ್ಯಕ್ಷರೇ, ಇತ್ತೀಚೆಗೆ ಆಕ್ರಮಣವಾದ ಜಾಗವನ್ನು ತೆರವು ಮಾಡಬೇಕೆಂದು ಆಜ್ಞೆ ಆಗಿದ್ದು ಆ ಪ್ರಕಾರ ತೆರವು ಮಾಡಿಸಲಾಗುತ್ತಿದೆ ಎಂದಿದ್ದಾರೆ. ಆದರೆ ಇಲ್ಲಿ ಏನಾಗಿದೆ ಎಂದರೆ ಸುಮಾರು ೧೦ ವರ್ಷಗಳಿಂದ ಈಚೆಗೆ ಗ್ರಾಮ ಲೆಕ್ಕಿಗರು ಯಾವುದೇ ಆಕ್ರಮಣದ ಬಗ್ಗೆ ಯಾವುದೇ ರೆಕಾರ್ಡ್ ಮಾಡಿರುವುದಿಲ್ಲ. ಸುಮಾರು ೧೦ ವರ್ಷಗಳಿಗಿಂತಾ ಮುಂಚೆಯಿಂದಲೂ ಕೃಷಿ ಮಾಡುತ್ತಾ ಬಂದಿರುವವರನ್ನೂ ಹೊರ ಹಾಕುವ ವ್ಯವಸ್ಥೆ ನಡೆಯುತ್ತಿದೆ ತಹಶೀಲ್ದಾರರು ಪೋಲೀಸ್ ಇಲಾಖೆಯವರಿಗೆ ಆದೇಶ ಕೊಟ್ಟು ಬಲವಂತದಿಂದ ಅವರನ್ನು ಹೊರಗೆ ಹಾಕುವ ಪ್ರಯತ್ನ ನಡೆಯುತ್ತಿದೆ. ಕಳೆದ ೧೦-೧೫ ವರ್ಷಗಳಿಂದ ಮನೆ ಕಟ್ಟಿಕೊಂಡು ಯಾರು ವಾಸ ಮಾಡುತ್ತಿದ್ದಾರೆ ಅವರಿಗೆ ಆ ಸ್ಥಳವನ್ನು ಕೊಡುವ ಬಗ್ಗೆ ವಿಶೇಷ ಆಜ್ಞೆಯನ್ನು ಮಾಡಬೇಕು ಎಂದು ನಾನು ಹೇಳುತ್ತೇನೆ. ಇನ್ನು ಮಾನ್ಯ ಮಂತ್ರಿಗಳು ಏನು ೨,೯೪೬ ಜನರು ಜಮೀನನ್ನು ಆಕ್ರಮಿಸಿರು

ತ್ತಾರೆ ಎಂದು ಹೇಳಿದ್ದಾರೆ ಅದು ಸರಿಯಾದ ಮಾಹಿತಿ ಅಲ್ಲ. ಅಲ್ಲಿ ಸುಮಾರು ೮ ಸಾವಿರ ಕುಟುಂಬ ದವರು ಸರ್ಕಾರಿ ಜಮೀನಿನಲ್ಲಿ ಕೃಷಿ ಮಾಡಿಕೊಂಡು ಜೀವನ ಮಾಡುತ್ತಿದ್ದಾರೆ. ಈ ಬಗ್ಗೆ ಸರಿಯಾದ ಒಂದು ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಯಾರಿಗೆ ಒಕ್ಕಲೆಬ್ಬಿಸಿದ್ದಾರೆ ಅವರಿಗೆ ಪರಿಹಾರ ವನ್ನು ಕೊಡಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಧನಂಜಯ ಕುಮಾರ್.—ಅಧ್ಯಕ್ಷರೇ, ಈ ಬಗ್ಗೆ ಸರ್ಕಾರ ಬಹಳ ಜಾಣ್ಮೆಯಿಂದ ಉತ್ತರ ಕೊಟ್ಟಹಾಗೆ ಕಾಣುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುಮ್ಕಿ, ಕಾಣಿ, ಬಾಣಿ ಜಮೀನು ಆಕ್ರಮಣ ಆಗಿದ್ದು ಅಂತಹದ್ದನ್ನು ತೆರವು ಮಾಡಬೇಕಾಗಿದೆ ಎಂದು ಹೇಳುತ್ತಿದ್ದಾರೆ. ಇವತ್ತು ಏನು ಸರ್ಕಾರ ಭೂ ಹೀನರಿಗೆ ೫ ಸೆಂಟ್ಸ್, ೩ ಸೆಂಟ್ಸ್ ಭೂಮಿಯನ್ನು ಕುಮ್ಕಿ, ಕಾಣಿ, ಬಾಣಿ ಜಮೀನನ್ನು ಕೊಡುವ ವ್ಯವಸ್ಥೆ ಮಾಡಿದ್ದಾರೋ ಆ ಒಂದು ಕಾನೂನಿನ ಅಧೀನದಲ್ಲಿ ಯಾರು ಕುಮ್ಕಿ, ಕಾಣಿ, ಬಾಣಿ ಜಮೀನನ್ನು ಆಕ್ರಮಣ ಮಾಡಿದ್ದಾರೆ ಅವರನ್ನು ತಂದು ಅವರ ಜಮೀನನ್ನು ಸಕ್ರಮ ಮಾಡುವಂತಹ ಕೆಲಸವನ್ನು ಏಕೆ ಕೈಗೊಳ್ಳಬಾರದು? ಇನ್ನು ಅರಣ್ಯ ಜಮೀನಿನ ಬಗ್ಗೆ ಹೇಳಿದ್ದಾರೆ. ಇವತ್ತು ಸಾವಿರಾರು ಜನರು ಜಮೀನನ್ನು ಆಕ್ರಮಣ ಮಾಡಿ ಸಾಗುವಳಿ ಮಾಡುತ್ತಿದ್ದಾರೆ. ಅವರು ಯಾವ ಜಮೀನನ್ನು ಆಕ್ರಮಣ ಮಾಡಿ ಸಾಗುವಳಿ ಮಾಡುತ್ತಿದ್ದಾರೆಂಬುದನ್ನು ವಿಚಾರ ಮಾಡದೇ ಇದು ಅರಣ್ಯ ಭೂಮಿ ಎಂದು ತೊಂದರೆ ಕೊಡುತ್ತಿದ್ದಾರೆ. ಇವತ್ತಿನ ದಿವಸ ರಾಜ್ಯ ಸರ್ಕಾರ ಇಂತಹ ಜಾಗ ಅರಣ್ಯ ಭೂಮಿ ಎಂದು ಹೇಳಿದರೆ ಅದನ್ನು ಕೇಂದ್ರ ಸರ್ಕಾರ ಅರಣ್ಯ ಭೂಮಿ ಎಂದು ಡಿಕ್ಲೇರ್ ಮಾಡಿರುತ್ತದೆ. ಇವತ್ತು ಏನು ಅರಣ್ಯ ಭೂಮಿ ಎಂದು ಅಲ್ಲಿ ಸಾಗುವಳಿ ಮಾಡು ವವರಿಗೆ ಏನು ತೊಂದರೆ ಕೊಡಲಾಗುತ್ತಿದೆ ಅದನ್ನು ತಪ್ಪಿಸುವ ಬಗ್ಗೆ ಸರ್ಕಾರ ಗಮನ ಹರಿಸಿ ಹಲವಾರು ವರ್ಷಗಳಿಂದ ಯಾರು ಭೂಮಿಯನ್ನು ಸಾಗುವಳಿ ಮಾಡುತ್ತಿದ್ದಾರೆ ಅದನ್ನು ಸಕ್ರಮ ಗೊಳಿಸಬೇಕೆಂದು ನನ್ನ ಸಲಹೆ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ೧೫ನೇ ಆಗಸ್ಟ್ ೧೯೪೨ರ ವರೆಗೆ ನಮಗೆ ದೊರಕಿರತಕ್ಕ ಮಾಹಿತಿಯ ಆಧಾರದ ಮೇಲೆ ನಾವು ಉತ್ತರವನ್ನು ಕೊಟ್ಟಿದ್ದೇವೆ. ಮತ್ತು ಮಾನ್ಯ ಸದಸ್ಯರು ಏನು ೮ ಸಾವಿರ ಕುಟುಂಬಗಳು ಸರ್ಕಾರಿ ಜಮೀನಿನಲ್ಲಿ ಕೃಷಿ ಮಾಡುತ್ತಿದ್ದಾರೆಂದು ಹೇಳಿದ್ದಾರೆ, ಆ ಬಗ್ಗೆ ಅವರಲ್ಲಿ ಅರ್ಜಿಗಳು ಇದ್ದು ಅವನ್ನು ನಮ್ಮ ಬಳಿಗೆ ಕಳುಹಿಸಿಕೊಟ್ಟರೆ ಆ ಬಗ್ಗೆ ನಾವು ಪರಿಶೀಲನೆ ಮಾಡುತ್ತೇವೆ. ಇಲ್ಲಿ ನಾನು ಕೆಲವು ಮಾಹಿತಿಗಳನ್ನು ಕೊಡುತ್ತೇನೆ. ಇದರ ಜೊತೆಗೆ ೧೩೫೫ ಕೇಸುಸ್‌ನಲ್ಲಿ ಹರಿಜನರಿಗೆ ಕೊಟ್ಟಿದ್ದೇವೆ. ೧೦೨ ಕೇಸುಸ್‌ನಲ್ಲಿ ರೆಗ್ಯುಲರೈಸ್ ಮಾಡಿದ್ದೇವೆ. ೧೬೫೫ ಎಕರೆಗಿಂತ ಜಾಸ್ತಿ ಜಮೀನನ್ನು ರೆಗ್ಯುಲರೈಸ್ ಮಾಡಿದ್ದೇವೆ. ೩ ಕೇಸುಸ್‌ಗಳು ಅಂಡರ್ ಕನ್ಸಿಡರೇಷನ್‌ನಲ್ಲಿ ಇವೆ. ಇನ್ನು ಮಾನ್ಯ ಸದಸ್ಯರು ಹಲವಾರು ವರ್ಷಗಳಿಂದ ಎಂದು ಏನು ಹೇಳಿದ್ದಾರೆ, ಅದರಂತೆ If an illegal occupation is there, it is illegal and void and no amount of argument will regularise it. That my submission.

ಡಾ|| ವಿ. ಎಸ್. ಆಚಾರ್ಯ.—ನಾನು ಒಂದು ಸ್ಪಷ್ಟೀಕರಣ ಕೇಳಬಯಸುತ್ತೇನೆ.

ಅಧ್ಯಕ್ಷರು.—ಆಗುವುದಿಲ್ಲ, I do not want to deviate from the rules.

ಶ್ರೀ ಎ. ಲಕ್ಷ್ಮೀಸಾಗರ್.—ಒಟ್ಟು ೨,೬೭೭ ಕೇಸುಸ್‌ನಲ್ಲಿ ೪,೮೪೮ ಎಕರೆ ಜಮೀನು ಅಕ್ವೇಪಕರ ಭೂಮಿಯಾಗಿರುತ್ತದೆ. ಇವುಗಳನ್ನು ಸಕ್ರಮಗೊಳಿಸುವುದಕ್ಕೆ ಕಾನೂನಿನ ಅಡ್ಡಿ ಇದೆಯೆಂದು ನಾನು ಮಂತ್ರಿಮಂಡಲ ತಮ್ಮ ಮುಖಾಂತರ ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಇದು ಕೇಂದ್ರ ಸರ್ಕಾರದ ಕಾನೂನು ಇದೆ.

ಶ್ರೀ ಕೆ. ರಾಮ್‌ಭಟ್.—ಆ ಅಧಿಕಾರ ನಿಮ್ಮ ಕೈಯಲ್ಲೇ ಉಂಟು.

ಶ್ರೀ ಎ. ಲಕ್ಷ್ಮೀಸಾಗರ್.—ಕಾಡನ್ನು ರಕ್ಷಣೆ ಮಾಡತಕ್ಕ ಒಂದು ವಿಷಯ ಇದರಲ್ಲಿ ಇದೆ. ಇಂಪ್ಲಿಮೆಂಟೇಷನ್ ಆಫೀಸರ್ ಯಾರೇ ಇರಲಿ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುವುದು ಒಂದು ಭಾಗ. ಕಾನೂನು ಅಸ್ತಿತ್ವದಲ್ಲಿರುವಂತೆ ಅಧಿಕಾರಿಗಳು ಅದನ್ನು ರಕ್ಷಣೆ ಮಾಡಬೇಕು. ಇಲ್ಲದೇ ಹೋದರೆ ಕರ್ತವ್ಯ ಲೋಪವಾಗುತ್ತದೆ. ತೊಂದರೆಯಾಗಿರುವುದರಿಂದ ಏನಾದರೂ ಮಾಡಿ ಸಹಾಯ ಮಾಡಿ, ಕಾನೂನು ತಿದ್ದುಪಡಿ ಮಾಡಿ ಎಂದು ಹೇಳುವುದು ಬೇರೆ. ಆದರೆ ಹಾಲಿ ಕಾನೂನಿನ

ಪ್ರಕಾರ ಸಕ್ರಮಗೊಳಿಸುವಂಥ ಪ್ರಕರಣಗಳಲ್ಲಿ ಸಕ್ರಮಗೊಳಿಸಲಾಗಿದೆ. ಮೂರು ಪ್ರಕರಣಗಳು ಮಾತ್ರ ಉಳಿದಿವೆ. ಅದನ್ನು ನೋಡುತ್ತಿದ್ದೇವೆ. ಉಳಿದ ಪ್ರಕರಣಗಳಲ್ಲಿ ಆಗುವುದಿಲ್ಲ ಎಂಬ ಮಾತನ್ನು ಹೇಳಿದ್ದೇನೆ.

ಶ್ರೀ ಕೆ. ವಸಂತ ಬಂಗೇರ.—ಮಾನ್ಯ ಅಧ್ಯಕ್ಷರೆ, ನಾವು ಕೇಳುವ ಪ್ರಶ್ನೆಯೇ ಬೇರೆ, ಅವರ ಉತ್ತರವೇ ಬೇರೆ.

ಶ್ರೀ ಕೆ. ರಾಮಭಟ್.—ಸರ್ಕಾರ ಇದಕ್ಕೆ ಸ್ಪೆ ಕೊಡಬೇಕು.

ಶ್ರೀ ವಿ. ಎಸ್. ಆಚಾರ್ಯ.—ಅಧ್ಯಕ್ಷರೆ.....

ಅಧ್ಯಕ್ಷರು.—ತಾವು ಎಲ್ಲರೂ ಎದ್ದು ಹೀಗೆ ಮಾತನಾಡಿದರೆ ಕೇಳುವುದಕ್ಕೆ ನಾನು ತಯಾರಿಲ್ಲ.

ಶ್ರೀ ಕೆ. ರಾಮಭಟ್.—ಮಾನ್ಯ ಸಚಿವರು ಇದರ ಬಗ್ಗೆ ಏನಾದರೂ ಆಶ್ವಾಸನೆ ಕೊಡಲಿ.

ಶ್ರೀ ಎ. ಲಕ್ಷ್ಮೀಸಾಗರ್.—ಈಗಿರತಕ್ಕ ಕಾನೂನಿನ ಪರಿಮಿತಿಯಲ್ಲಿ ಅಕ್ರಮವಾದ ಭೂಮಿಯನ್ನು ಸಕ್ರಮಗೊಳಿಸುವುದಕ್ಕಾಗುವುದಿಲ್ಲ. ಅದಕ್ಕೆ ಕಾನೂನಿನ ಅಡ್ಡಿ ಇದೆಯೆಂಬ ಮಾತನ್ನು ಇನ್ನೊಂದು ಸಾರಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ. ವಸಂತ ಬಂಗೇರ.—ಬೆಳ್ತಂಗಡಿಯಲ್ಲಿ ೮ ಸಾವಿರ ಕುಟುಂಬಗಳಿವೆ. ಈಗ ಪೋಲೀಸರ ಮುಖಾಂತರ ಕೇಸ್ ದಾಖಲು ಮಾಡಿಕೊಂಡು ಅವರನ್ನು ಹೊರಗೆ ಹಾಕುತ್ತಿದ್ದಾರೆ. ಇದು ಸರಿಯಲ್ಲ. ಗ್ರಾಮ ಕರಣಿಕರು ಸರಿಯಾದ ದಾಖಲೆ ಮಾಡಿಕೊಂಡಿಲ್ಲ. ಅವರ ತಪ್ಪಿಗೆ ಇಪರಿಗೆ ಬಲಿ ಹಾಕಬಾರದು. ಇದನ್ನು ತಡೆಹಿಡಿಯಬೇಕು.

ಶ್ರೀ ವಿ. ಧನಂಜಯ ಕುಮಾರ್.—ನನ್ನ ದುರಾದೃಷ್ಟವೋ ಬಡ ರೈತರ ದುರಾದೃಷ್ಟವೋ ಗೊತ್ತಾಗುತ್ತಿಲ್ಲ ಇದು. ಕಂದಾಯ ಮಂತ್ರಿಗಳ ಗೈರುಹಾಜರಿಯಲ್ಲಿ ಕಾನೂನು ಮಂತ್ರಿಗಳು ಉತ್ತರ ಹೇಳುತ್ತಿದ್ದಾರೆ. ಕಾನೂನು ಮಂತ್ರಿಗಳು ಕಾನೂನಿನ ಬಗ್ಗೆ ವಿವರಣೆ ಹೇಳುತ್ತಾರೆ. ಆದರೆ ಇದನ್ನು ಮಾನವೀಯತೆ ದೃಷ್ಟಿಯಿಂದ ನೋಡಬೇಕು. ಹಲವಾರು ವರ್ಷಗಳಿಂದ ಸಾಗುವಳಿ ಮಾಡುತ್ತಿರುವ ಬಡರೈತನ ಬಗ್ಗೆ ಕನಿಕರದ ದೃಷ್ಟಿ ಅವರ ಹೇಳಿಕೆಯಲ್ಲಿ ಇರಲಿಲ್ಲ. ಕಾಡು ಪ್ರದೇಶದಲ್ಲಿ ಜನ ಆಕ್ರಮಣ ಮಾಡಿದ್ದಾರೆ ಎಂದು ಮಂತ್ರಿಗಳು ಹೇಳಿದ್ದಾರೆ. ಅದು ಕಾಡು ಪ್ರದೇಶ ಅಲ್ಲ. ಕಾಡು ಭಫರ್ ಪ್ರದೇಶ. ಬಫರ್ ಪ್ರದೇಶ ಎಂದರೆ ಮುಂದೆ ಕಾಡು ಬೆಳೆಸುವುದಕ್ಕೆ ಮೀಸಲಿಡತಕ್ಕ ಜಾಗ. ಅಲ್ಲಿ ಹಲವಾರು ವರ್ಷಗಳಿಂದ ಆಕ್ರಮಣ ಮಾಡಿದ್ದಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದು ಕೇಂದ್ರದ ಕಾಯಿದೆ. Forest Conservation Act of 1980 is a Central Act. The State Government cannot go against the provisions of the Central Act. This is the difficulty.

ಡಾ|| ವಿ.ಎಸ್. ಆಚಾರ್ಯ.—ಈ ಸದನವನ್ನು ಅವರು ತಪ್ಪು ದಾರಿಗೆ ಎಳೆದಂತೆ ಕಾಣುತ್ತದೆ. ೧೯೮೦ರಲ್ಲಿ ಆಕ್ರಮ.....

MR. SPEAKER.—I am not allowing. There is no scope for detailed discussion. ಇದನ್ನು ಇನ್ನು ಚರ್ಚೆ ಮಾಡಬೇಕಾದರೆ ಬೇರೆ ರೂಪದಲ್ಲಿ ನೋಟೀಸ್ ಕೊಡಲಿ. I don't allow any discussion on that.

ಮನವಿಗಳು

ಗಾಯಿತ್ರಿ ವಿಮೆನ್ಸ್ ವೆಲ್‌ಫೇರ್ ಅಸೋಸಿಯೇಷನ್ ಬಗ್ಗೆ

ಶ್ರೀ ಮೈಕೆಲ್ ಬಿ. ಫರ್ನಾಂಡಿಸ್.—ಗಾಯಿತ್ರಿ ವಿಮೆನ್ಸ್ ವೆಲ್‌ಫೇರ್ ಅಸೋಸಿಯೇಷನ್ ನವರು ನಡೆಸುವಂಥ ಎಚ್. ಎಂ. ಟಿ. ವಾಚ್ ಫ್ಯಾಕ್ಟರಿಗೆ ಸಂಬಂದಪಟ್ಟಂಥ ಯೂನಿಟ್‌ನಲ್ಲಿ ನಡೆಯುತ್ತಿರತಕ್ಕ ವಿಚಾರದ ಬಗ್ಗೆ ರೂಲ್ ೩೫ರ ಕೆಳಗೆ ನಾನು ೧೫ ದಿವಸಗಳ ಕೆಳಗೆ ಪ್ರಸ್ತಾಪ